KATK010047762023

**<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ತುಮಕೂರು</u>**

**<u>ಸತ್ರ ಮೊಕದ್ದಮೆ.106/2023</u>**

ಪ್ರಾ.ಸಾ. ಃ **7**

ದೋ.ಸಾ. ಃ **8**

ದಿ.**27.05.2026.**

ಹೆಸರು ಃ ಶಿವಕುಮಾರ್ ಜಿ.ಸಿ.

ತಂದೆಯ ಹೆಸರು ಃ ಚನ್ನಬಸವಯ್ಯ

ವಯಸ್ಸು ಃ **34** ವರ್ಷ

ಉದ್ಯೋಗ ಃ ಪೈಂಟಿಂಗ್ ಕೆಲಸ

ವಾಸಸ್ಥಳ ಃ ಗುಬ್ಬಿ

ಸಾಕ್ಷಿಯನ್ನು ಕರೆಸಿ, ಸತ್ಯಪ್ರತಿಜ್ಞೆಯ ಪ್ರಮಾಣವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ</u>**

1. ಈಗ ನನಗೆ ತೋರಿಸಿದ ಕೃತ್ಯ ನಡೆದ ಸ್ಥಳದ ಪಂಚನಾಮೆಯಲ್ಲಿ ನನ್ನ ಸಹಿ ಇದೆ. ಪಂಚನಾಮೆಯನ್ನು ನಿಶಾನೆ ಪಿ12 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ12(ಎ) ಎಂದು ಗುರುತಿಸಲಾಯಿತು. ಆ ಸಹಿಯನ್ನು ಗುಬ್ಬಿ ಪೋಲೀಸ್ ಠಾಣೆಗೆ ನಮ್ಮ ದೇವಸ್ಥಾನದ ಗಲಾಟೆಯ ನಿಮಿತ್ತ ಹೋದಾಗ ಪೋಲೀಸರು ತೆಗೆದುಕೊಂಡರು. ಅದರಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ. ಆರೋಪಿಯನ್ನು ನೋಡಿದ್ದೇನೆ. ಆರೋಪಿಯ ಮನೆ ನಮ್ಮ ಮನೆಯ ಹತ್ತಿರ ಇದೆ. ಅವರ ಮನೆಗೆ ಹೋಗಿದ್ದೇನೆ. ಆರೋಪಿಯ ಹೆಂಡತಿಯ ಹೆಸರು ಮಾಲ. ಮಾಲ ಅವರ ಮನೆಯಲ್ಲಿ ನೇಣು ಹಾಕಿಕೊಂಡು ಮೃತಪಟ್ಟಿರುತ್ತಾರೆ. ಆ ಸಮಯದಲ್ಲಿ ನಾನು ಅವರ ಮನೆಗೆ ಹೋಗಿಲ್ಲ.

(ಈ ಸಾಕ್ಷಿಯು ಮಹಜರಿಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದರಿಂದ ಪ್ರತಿಕೂಲ ಪಕ್ಷಕಾರರು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅನುಮತಿ ನೀಡಬೇಕೆಂದು ಸರಕಾರಿ ಅಭಿಯೋಜಕರು ಭಿನ್ನವಿಸಿರುತ್ತಾರೆ. ಈ ಪ್ರಕರಣದ ಕಾಗದ ಪತ್ರಗಳನ್ನು ಪರಿಶೀಲಿಸಿದಾಗ ಈ ಸಾಕ್ಷಿಯು ಮಹಜರಿಗೆ ವಿರೋಧಾತ್ಮಕವಾಗಿ ಸಾಕ್ಷ್ಯ

ನುಡಿದಿರುವುದು ಕಂಡುಬರುತ್ತದೆ. ಆದ್ದರಿಂದ ಪ್ರತಿಕೂಲ ಪಕ್ಷಕಾರನು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅಭಿಯೋಜನೆಗೆ ಅನುಮತಿ ನೀಡುವುದು ಸೂಕ್ತ ಮತ್ತು ನ್ಯಾಯೋಚಿತ ಎಂದು ಮನಗೊಂಡು ಅನುಮತಿ ನೀಡಲಾಯಿತು).

**ಪಾಟೀ ಸವಾಲು ಮಾನ್ಯ ಸರ್ಕಾರಿ ಅಭಿಯೋಜಕರಿಂದ :**

2. ದಿ.19.07.2022 ರಂದು ಬೆಳಿಗ್ಗೆ 9.00-9.30 ಗಂಟೆಯವರೆಗೆ ಆರೋಪಿಯ ಮನೆಯಲ್ಲಿ ಆತನ ಹೆಂಡತಿ ಮಾಲ ನೇಣು ಹಾಕಿಕೊಂಡು ಮೃತಪಟ್ಟ ಬಗ್ಗೆ ಪೋಲೀಸರು ಮಹಜರ್ ಮಾಡಿ, ಮಹಜರನ್ನು ಓದಿ ಹೇಳಿ ನನ್ನ ಸಹಿ ತೆಗೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ಆರೋಪಿ ನಮ್ಮ ಮನೆ ಹತ್ತಿರ ಇರುವುದರಿಂದ ಆತನನ್ನು ಈ ಪ್ರಕರಣದಿಂದ ಬಚಾವು ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಶ್ರೀ.ಹೆಚ್.ಎನ್.ಗುರುನಂಜೇಗೌಡ, ವಕೀಲರಿಂದ ಆರೋಪಿತನ ಪರವಾಗಿ :**

ಇಲ್ಲ

(ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಲ್ಪಟ್ಟಿತು).

ಓದಿ ಹೇಳಿ ಕೇ ಸರಿ ಇದೆ ಎಂದು ಒಪ್ಪಿದ್ದಾರೆ.

ಸಹಿ/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು